ಕ್ರ. ಸಂ. 30, 149ನೇ

# ವಿಧಾನ ಪರಿಷತ್ತು ಸದಸ್ಯರಾದ ಮಾನ್ಯ ಶ್ರೀ ಯು.ಬಿ.ವೆಂಕಟೇಶ್ ರವರು ಮಂಡಿಸಿರುವ ಶೂನ್ಯ ವೇಳೆಯ ಸೂಚನೆಗೆ ಉತ್ತರ:

ಪ್ರಶ್ನೆ : " ದಿನಾಂಕ:19.02.2023ರ ವಿಜಯವಾಣಿ ಮತ್ತು ಸಂಯುಕ್ತ ಕರ್ನಾಟಕ ದಿನಪತ್ರಿಕೆಗಳಲ್ಲಿ ಪತ್ತೆಯಾಗಿಲ್ಲ 1,187 ಗುದ್ದೋಡು ಕೇಸ್ ಅಪಘಾತವೆಸಗಿ ಹಿಟ್ ಅಂಡ್ ರನ್ ಎಂಬ ತಲೆಬರಹದಡಿಯಲ್ಲಿ ವರದಿ ಪ್ರಕಟವಾಗಿರುತ್ತದೆ.

ರಾಜ್ಯದಲ್ಲಿ 2019 ರಿಂದ 2023ರ ಜನವರಿವರೆಗೆ 4 ವರ್ಷಗಳ ಅವಧಿಯಲ್ಲಿ ಅತೀ ವೇಗವಾಗಿ ವಾಹನ ಚಲಾಯಿಸಿ ಅಪಘಾತವೆಸಗಿ ಪರಾರಿಯಾಗುತ್ತಿರುವವರ ಸಂಖ್ಯೆ 4549 ಆಗಿದ್ದು, ಈ ಪೈಕಿ ಪೊಲೀಸರು 3,360 ಪ್ರಕರಣಗಳನ್ನು ಪತ್ತೆಹಚ್ಚಿದ್ದು, ಉಳಿಕೆ 1,187 ಪ್ರಕರಣಗಳು ಈವರೆಗೆ ಪತ್ತೆಹಚ್ಚಲು ಪೊಲೀಸರಿಂದ ಸಾಧ್ಯವಾಗಿಲ್ಲ ಎಂಬುವುದು ಆಶ್ಚರ್ಯಕರವಾಗಿದೆ. ಹಿಟ್ ಅಂಡ್ ರನ್ ಅಪಘಾತಗಳಿಂದ 952 ಮಂದಿ ಮೃತಪಟ್ಟಿದ್ದು, 3807 ಮಂದಿ ಗಾಯಗೊಂಡಿರುವುದಾಗಿ ವರದಿಯಾಗಿದೆ. ಇಂತಹ ಪ್ರಕರಣಗಳಲ್ಲಿ ಗಾಯಗೊಂಡವರಿಗೆ 50 ಸಾವಿರ ರೂ. ಹಾಗೂ ಮೃತರ ಅವಲಂಬಿತ ಕುಟುಂಬ ಸದಸ್ಯರಿಗೆ 2 ಲಕ್ಷ ರೂ. ಪರಿಹಾರ ದೊರೆಯುತ್ತಿದ್ದು ಇದು ತೀರಾ ಕಡಿಮೆಯಾಗಿದ್ದು, ಪರಿಹಾರದ ಮೊತ್ತವನ್ನು ಹೆಚ್ಚು ಮಾಡಬೇಕಾಗಿ ಸಾರ್ವಜನಿಕರಿಂದ ಒತ್ತಾಯಗಳು ಕೇಳಿಬರುತ್ತಿದೆ.

ನಗರ ಪ್ರದೇಶಗಳಲ್ಲಿನ ಅಪಘಾತ ಪ್ರಕರಣಗಳನ್ನು ಸಿಸಿಟಿವಿ ದೃಶ್ಯಾವಳಿ, ವಾಹನ ನೋಂದಣಿ ಸಂಖ್ಯೆ ಆಧಾರದಲ್ಲಿ ಸುಲಭವಾಗಿ ಪತ್ತೆ ಹಚ್ಚಬಹುದಾಗಿದೆ. ಆದರೆ, ಗ್ರಾಮೀಣ ಪ್ರದೇಶಗಳಲ್ಲಿ, ರಾಷ್ಟ್ರೀಯ ಹೆದ್ದಾರಿ ಮತ್ತು ರಾಜ್ಯ ಹೆದ್ದಾರಿಗಳಲ್ಲಿ ಹಿಟ್ ಅಂಡ್ ರನ್ ನಡೆದಾಗ ಆರೋಪಿಗಳನ್ನು ಪತ್ತೆಹಚ್ಚುವುದು ಪೊಲೀಸರಿಗೆ ಸವಾಲಾಗಿರುತ್ತದೆ.

ಬೆಂಗಳೂರು ನಗರದಲ್ಲಿ ಹಿಟ್ ಅಂಡ್ ರನ್ ಘಟನೆಗಳು ಸರ್ವೇ ಸಾಮಾನ್ಯವಾಗಿದ್ದು, ದಿನಂಪ್ರತಿ ವರದಿಯಾಗುತ್ತಲೆ ಇದ್ದು, ಯುವ ಚಾಲಕರ ಸಂಖ್ಯೆ ಅಧಿಕವಾಗಿದೆ. ಚಾಲಕರ ಅಜಾಗರೂಕತೆಯ ಚಾಲನೆ, ವೇಗದ ಚಾಲನೆ, ಕುಡಿದು ಚಾಲನೆ ಮಾಡುವುದು ಹಾಗೂ ಸಾರ್ವಜನಿಕರಿಂದ ಹಲ್ಲೆ ನಡೆಯುವ ಸಂಭವವಿದೆ ಎಂದು ಭಾವಿಸಿ ಅಪಘಾತ ಸ್ಥಳದಿಂದ ಪರಾರಿಯಾಗುತ್ತಿರುವುದಾಗಿ ತಿಳಿದು ಬಂದಿದೆ.

ಕಳೆದ ಜನವರಿ ತಿಂಗಳಲ್ಲಿ 125 ಅಪಘಾತಗಳು ವರದಿಯಾಗಿದ್ದು, 26 ಮಾರಣಾಂತಿಕ, 99 ಮಾರಣಾಂತಿಕವಲ್ಲದ ಅಪಘಾತವೆಂದು ವಿಂಗಡಿಸಲಾಗಿದೆ. ಇದರಲ್ಲಿ ಬೆಂಗಳೂರು ನಗರದಲ್ಲಿಯೇ 109 ಅಪಘಾತ ಸಂಭವಿಸಿರುವುದು ಗಮನಾರ್ಹ ಅಂಶವಾಗಿದೆ. ಜನವರಿ ತಿಂಗಳಲ್ಲಿ ನಗರದ ಮಾಗಡಿ ರಸ್ತೆಯಲ್ಲಿ ಸಂಭವಿಸಿದ ಅಪಘಾತ ಪ್ರಕರಣವು ಇದಕ್ಕೆ ಉದಾರಣೆಯಾಗಿದ್ದು, ವಯೋವೃದ್ಧನನ್ನು ನಡುರಸ್ತೆಯಲ್ಲಿ ಸುಮಾರು 3 ರಿಂದ 4ಕಿಮೀ ಎಳೆದೊಯ್ದಿರುವ ಘಟನೆ ಮನಃ ಕಲಕುವಂತಿತ್ತು.

ಆದುದರಿಂದ, ಸಾರಿಗೆ ಇಲಾಖೆ ಮತ್ತು ಪೊಲೀಸ್ ಇಲಾಖೆಯೂ ಒಟ್ಟಿಗೆ ಸೇರಿ ತಿಂಗಳಲ್ಲಿ ಒಂದು ದಿವಸ ಚಾಲನ ಪರವಾನಗಿ ನೀಡುವ ಮುನ್ನ ಯುವ ಜನತೆ ವಾಹನ ಚಾಲನೆ ಸಂದರ್ಭದಲ್ಲಿ ಮತ್ತು ಅಪಘಾತ ಸಂಭವಿಸಿದ ಸಂದರ್ಭದಲ್ಲಿ ತೆಗೆದು ಕೊಳ್ಳಬೇಕಾದ ಮುನ್ನೆಚರಿಕಾ ಕ್ರಮಗಳ ಬಗ್ಗೆ ಕಾರ್ಯಾಗಾರವನ್ನು ಏರ್ಪಡಿಸಿ ತಿಳುವಳಿಕೆಯನ್ನು ನೀಡಬೇಕಾಗಿ ಹಾಗೂ ಮೃತರಿಗೆ ನೀಡುವ ಪರಿಹಾರ ಮೊತ್ತವನ್ನು ರೂ. 5.00 ಲಕ್ಷಗಳಿಗೆ ಹೆಚ್ಚಿಸಬೇಕಾಗಿ ಮಾನ್ಯ ಸಾರಿಗೆ ಮತ್ತು ಗೃಹ ಸಚಿವರನ್ನು ಶೂನ್ಯ ವೇಳೆಯಲ್ಲಿ ಒತ್ತಾಯಿಸುತ್ತೇನೆ".

ರಾಜ್ಯದಲ್ಲಿ ಬೆಂಗಳೂರು ನಗರ ಒಳಗೊಂಡಂತೆ, ಸಂಚಾರ ವಿಭಾಗದಲ್ಲಿ ಅಪಘಾತಗಳನ್ನು ತಡೆಗಟ್ಟುವ ಉದ್ದೇಶದಿಂದ ವಿವಿಧ ರೀತಿಯ ವಾಹನ ಚಾಲಕರು/ಸವಾರರುಗಳಿಗೆ ಸಂಚಾರ ನಿಯಮಗಳು, ಅವುಗಳ ಪಾಲನೆಯ ಮಹತ್ವ, ರಸ್ತೆ ಬಳಕೆ ಮಾಡುವಾಗ ಕೈಗೊಳ್ಳಬೇಕಾದ

ಉತ್ತರ: ಮುನ್ನೆಚ್ಚರಿಕಾ ಕ್ರಮಗಳ ಬಗ್ಗೆ ನಿರಂತರವಾಗಿ ಬೆಂಗಳೂರು ನಗರದಲ್ಲಿನ ಥಣಿಸಂದ್ರದಲ್ಲಿರುವ ಸಂಚಾರ ತರಬೇತಿ ಮತ್ತು ರಸ್ತೆ ಸುರಕ್ಷತಾ ಸಂಸ್ಥೆಯಲ್ಲಿ ಕಾರ್ಯಾಗಾರವನ್ನು ಆಯೋಜಿಸುತ್ತಾ ತರಬೇತಿಯನ್ನು ನೀಡಲಾಗುತ್ತಿರುತ್ತದೆ. ಪ್ರತಿ ವರ್ಷ ಜನವರಿ ತಿಂಗಳಲ್ಲಿ ರಸ್ತೆ ಸುರಕ್ಷತಾ ಸಪ್ತಾಹವನ್ನು ಹಮ್ಮಿಕೊಂಡು ಸಂಚಾರ ನಿಯಮಗಳ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸುತ್ತಾ ರಸ್ತೆ ಬಳಕೆದಾರರಿಗೆ ಸಂಭವಿಸಬಹುದಾದ ಅಪಘಾತಗಳನ್ನು ತಡೆಗಟ್ಟಲು ಕೈಗೊಳ್ಳಬಹುದಾದ ಕ್ರಮಗಳ ಬಗ್ಗೆ ತಿಳುವಳಿಕೆಯನ್ನು ನೀಡಲಾಗುತ್ತಿರುತ್ತದೆ. ಈ ಬಗ್ಗೆ ಸಾಮಾಜಿಕ ಜಾಲತಾಣಗಳ ಮೂಲಕವೂ ಸಂಚಾರ ನಿಯಮಗಳ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸಲಾಗುತ್ತಿದೆ.

ಪ್ರತಿ ತಿಂಗಳು ಅಪಘಾತಗಳಿಗೆ ಕಾರಣವಾಗುವ ಅಂಶಗಳ ಬಗ್ಗೆ ವಿಶ್ಲೇಷಣೆಯನ್ನು ಕೈಗೊಂಡು, ಅಪಘಾತಗಳನ್ನು ತಡೆಗಟ್ಟಲು ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿರುತ್ತದೆ.

ಅಪಘಾತ ಸಂಭವಿಸಿದ ಸಂದರ್ಭದಲ್ಲಿ ಕೈಗೊಳ್ಳಬೇಕಾದ ಮುನ್ನೆಚ್ಚರಿಕಾ ಕ್ರಮಗಳ ಬಗ್ಗೆ ಸಾರ್ವಜನಿಕರಿಗೆ ತಿಳುವಳಿಕೆ ನೀಡಲು ಸಾರಿಗೆ ಇಲಾಖೆಯಿಂದ ಕೇಂದ್ರ ಮೋಟಾರು ವಾಹನಗಳ ನಿಯಮಗಳು 1989ರ ನಿಯಮ 15 ರಲ್ಲಿ ರೂಪಿಸಿದ ನಿಯಮಗಳಡಿ, ಚಾಲನಾ ಅನುಜ್ಞಾ ಪತ್ರ ಬಯಸುವ ಅಭ್ಯರ್ಥಿಗಳಿಗೆ ಪ್ರಾಯೋಗಿಕ ಪರೀಕ್ಷೆ ನಡೆಸುವ ಪೂರ್ವದಲ್ಲಿ ರಸ್ತೆ ನಿಯಮಗಳು, ಅಪಘಾತಗಳು, ಸಂಚಾರಿ ನಿಯಮಗಳ ಕುರಿತಂತೆ ಪ್ರತಿಯೊಂದು ಕಛೇರಿಯಲ್ಲಿ ಎಲ್.ಇ.ಡಿ. ಸ್ಕ್ರೀನ್ ಗಳ ಮೂಲಕ ಸೂಕ್ತ ತಿಳುವಳಿಕೆಯನ್ನು ನೀಡುವ ವ್ಯವಸ್ಥೆಯನ್ನು ಪ್ರಾದೇಶಿಕ ಸಾರಿಗೆ ಕಛೇರಿಗಳಲ್ಲಿ ಕೈಗೊಳ್ಳಲಾಗಿದೆ. ಕಲಿಕಾ ಚಾಲನಾ ಪ್ರಮಾಣಪತ್ರ ಬಯಸುವ ಅಭ್ಯರ್ಥಿಗಳಿಗೆ ಆನ್ ಲೈನ್ ಮೂಲಕವೇ ಸಾರಿಗೆ ಇಲಾಖೆಯ ಜಾಲತಾಣದ ಮೂಲಕ ಸಂಚಾರಿ ನಿಯಮಗಳ ಕುರಿತಂತೆ ಅರಿವನ್ನು ಮೂಡಿಸುವ ವಿಷಯಗಳನ್ನು ಅಳವಡಿಸಲಾಗಿದೆ.

ಭಾರಿ ವಾಹನ ಚಾಲನಾ ಅನುಜ್ಞಾಪತ್ರ ಹೊಂದಿರುವ ವಾಹನ ಚಾಲಕರಿಗೆ ಚಾಲನಾ ಅನುಜ್ಞಾಪತ್ರ ನವೀಕರಿಸುವ ಪೂರ್ವದಲ್ಲಿ ಭಾರಿ ವಾಹನ ಚಾಲಕರನ್ನು ತರಬೇತಿಗೊಳಿಸಿ ಗುಣಮಟ್ಟದ ಚಾಲನೆಯನ್ನು ಹೊಂದುವ ಸಲುವಾಗಿ ಬೆಂಗಳೂರಿನ ಯಲಹಂಕ, ಧಾರವಾಡ, ಮಂಗಳೂರು ಮತ್ತು ಕಲಬುರ್ಗಿ ಗಳಲ್ಲಿ ಭಾರಿ ವಾಹನ ಚಾಲಕರ ತರಬೇತಿ ಕೇಂದ್ರಗಳಲ್ಲಿ ಒಂದು ದಿನದ ಪುನರ್-ಮನನ ತರಬೇತಿ ಕಾರ್ಯವನ್ನು ಮಾಡಲಾಗುತ್ತಿದೆ. ಇದಲ್ಲದೆ, ಈ ಕೆಳಕಂಡಂತೆ ಜಾಗೃತಿ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

1. ಪ್ರತಿ ವರ್ಷ ಜನವರಿ ಮಾಹೆಯಲ್ಲಿ ರಸ್ತೆ ಸುರಕ್ಷತಾ ಸಪ್ತಾಹ / ಮಾಸಾಚರಣೆ ಕಾರ್ಯ ಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.
2. ಸದರಿ ಕಾರ್ಯಗಳ ಸಂದರ್ಭದಲ್ಲಿ ಭಿತ್ತಿಪತ್ರಗಳು ಮತ್ತು ಫಲಕಗಳ ಮೂಲಕ ಜಾಗೃತಿ ಮೂಡಿಸಲಾಗುತ್ತಿದೆ.
3. ಎಫ್.ಎಂ. ರೇಡಿಯೋ ಮೂಲಕವೂ ಸಹ ರಸ್ತೆ ಸುರಕ್ಷತೆ ಜಾಗೃತಿ ಕ್ರಮಗಳ ಬಗ್ಗೆ ಅರಿವು ಮೂಡಿಸಲಾಗುತ್ತಿದೆ.
4. ದೂರದರ್ಶನ ಮತ್ತು ಇತರೆ ಮಾಧ್ಯಮಗಳ ಮೂಲಕ ರಸ್ತೆ ಸುರಕ್ಷತೆ ನಿಯಮಗಳ ಬಗ್ಗೆ ವ್ಯಾಪಕ ತಿಳುವಳಿಕೆ ಮೂಡಿಸುವ ಕ್ರಮ ಕೈಗೊಳ್ಳಲಾಗುತ್ತಿದೆ.

5. ಪ್ರಮುಖ ದಿನಪತ್ರಿಕೆಗಳಲ್ಲಿ ಸಂಚಾರಿ ನಿಯಮಗಳ ಪಾಲನೆ ಮತ್ತು ರಸ್ತೆ ಸುರಕ್ಷತೆ ಜಾಗೃತಿ ಬಗ್ಗೆ ಜಾಹೀರಾತು ಮೂಲಕ ಅರಿವು ಮೂಡಿಸಲಾಗುತ್ತಿದೆ.
6. ರಸ್ತೆ ನಿಯಮಗಳು, ಅಪಘಾತಗಳು, ಸಂಚಾರಿ ನಿಯಮಗಳ ಕುರಿತಂತೆ ಪ್ರತಿಯೊಂದು ಪ್ರಾದೇಶಿಕ ಸಾರಿಗೆ ಕಛೇರಿಯಲ್ಲಿ ಎಲ್.ಇ.ಡಿ. ಸ್ಕ್ರೀನ್ ಗಳ ಮೂಲಕ ಚಾಲನಾ ಪರೀಕ್ಷೆಗೆ (Driving test) ಬಂದ ಸಾರ್ವಜನಿಕರಿಗೆ ತಿಳುವಳಿಕೆಯನ್ನು ನೀಡಲಾಗುತ್ತಿದೆ.
7. ಅಪಘಾತಗಳನ್ನು ನಿಯಂತ್ರಿಸಲು ಕೈಗೊಳ್ಳಬೇಕಾದ ಮುನ್ನೆಚ್ಚರಿಕೆ ಕಾರ್ಯಗಳು ಹಾಗೂ ಅಪಘಾತ ಸಂಭವಿಸಿದ ಸಂದರ್ಭದಲ್ಲಿ ತೆಗೆದುಕೊಳ್ಳಬೇಕಾದ ಪ್ರಾಥಮಿಕ ಕಾರ್ಯಗಳ ಬಗ್ಗೆಯೂ ಸಹ ಬೀದಿ ನಾಟಕ, ಪಾದಯಾತ್ರೆ, ಕರಪತ್ರಗಳು ಮತ್ತು Hoarding ಗಳ ಹಂಚಿಕೆ ಮೂಲಕ ಜನಜಾಗೃತಿ ಮೂಡಿಸಲಾಗುತ್ತಿದೆ.

ಮುಂದುವರೆದು, ದಿನೇ ದಿನೇ ಹೆಚ್ಚುತ್ತಿರುವ ರಸ್ತೆ ಅಪಘಾತಗಳ ಹಿನ್ನೆಲೆಯಲ್ಲಿ, ಸಮರ್ಪಕ ಹಾಗೂ ವೈಜ್ಞಾನಿಕವಾಗಿ ಚಾಲನಾ ನೈಪುಣ್ಯತೆಯನ್ನು ಪರೀಕ್ಷಿಸುವ ಸಲುವಾಗಿ ಇತ್ತೀಚೆಗೆ ರಾಜ್ಯದ ಹಲವು ಪ್ರಾದೇಶಿಕ ಸಾರಿಗೆ ಕಛೇರಿಗಳ ವ್ಯಾಪ್ತಿಯಲ್ಲಿ ಅಂದರೆ, ಜ್ಞಾನಭಾರತಿ, ಎಲೆಕ್ಟ್ರಾನಿಕ್ ಸಿಟಿ, ಮೈಸೂರು, ಕಲಬುರ್ಗಿ, ಶಿವಮೊಗ್ಗ, ಧಾರವಾಡ ಮತ್ತು ಹಾಸನ ಜಿಲ್ಲೆಗಳಲ್ಲಿ ಸ್ವಯಂಚಾಲಿತ ಚಾಲನಾ ಪರೀಕ್ಷಾ ಪಥಗಳನ್ನು ಈಗಾಗಲೇ ನಿರ್ಮಿಸಲಾಗಿದೆ ಹಾಗೂ ಬೆಳಗಾವಿ, ಮಂಗಳೂರು ಮತ್ತು ರಾಯಚೂರು ನಲ್ಲಿಯೂ ಅಂತಹ ಪರೀಕ್ಷಾ ಕೇಂದ್ರಗಳನ್ನು ನಿರ್ಮಿಸುವ ಕಾರ್ಯ ಪ್ರಗತಿಯಲ್ಲಿದೆ. ಸದರಿ ಕೇಂದ್ರಗಳ ಮೂಲಕ ಚಾಲನಾ ಅನುಜ್ಞಾಪತ್ರ ಕೋರಿ ಬರುವ ಅಭ್ಯರ್ಥಿಗಳ ಚಾಲನಾ ನೈಪುಣ್ಯತೆಯನ್ನು ವೈಜ್ಞಾನಿಕವಾಗಿ ಮತ್ತು ನಿಖರವಾಗಿ ಪರೀಕ್ಷಿಸುವ ಮೂಲಕ ಗುಣಮಟ್ಟದ ಚಾಲಕರನ್ನು ರೂಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ರಸ್ತೆ ಅಪಘಾತಗಳ ಹಿಟ್ & ರನ್ ಪ್ರಕರಣಗಳಲ್ಲಿ ("ಸಿ" ರಿಪೋರ್ಟ್) ಗಾಯಾಳುಗಳಿಗೆ ಮತ್ತು ಮೃತಪಟ್ಟ ಕುಟುಂಬದ ಸದಸ್ಯರುಗಳಿಗೆ ವಿತರಿಸುತ್ತಿರುವ ಪರಿಹಾರ ಮೊತ್ತವನ್ನು ಪ್ರಸ್ತುತ ಗಾಯಾಳುಗಳಿಗೆ ಇರುವ ಮೊತ್ತವನ್ನು ರೂ.12,500/- ಗಳಿಂದ ರೂ.50,000/- ಗಳಿಗೆ ಮತ್ತು ಮೃತಪಟ್ಟ ಕುಟುಂಬದ ಅವಲಂಬಿತ ಸದಸ್ಯರುಗಳಿಗೆ ರೂ.50,000/- ಗಳಿಂದ ರೂ.2,00,000/- ದವರೆಗೆ ಹೆಚ್ಚಿಸಲಾಗಿದೆ, ಈ ಯೋಜನೆಯು ದಿನಾಂಕ:01.04.2022 ರಿಂದ ಜಾರಿಗೆ ಬರುವಂತೆ ಭಾರತ ಸರ್ಕಾರದ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯವು ದಿನಾಂಕ:25.02.2022ರ ಭಾರತ ಗೆಜೆಟ್‌ನಲ್ಲಿ ಪ್ರಕಟಿಸಿರುತ್ತದೆ. ಅದರಂತೆ ಡಿಜಿ ಮತ್ತು ಐಜಿಪಿಯವರ ಕಛೇರಿ ಸುತ್ತೋಲೆ ಸಂಖ್ಯೆ :ಸಿಟಿಆರ್‌ಎಸ್-2/43/2021-22, ದಿನಾಂಕ.17.03.2022ರಲ್ಲಿ ಈ ಬಗ್ಗೆ ಪರಿಷ್ಕೃತ ಆದೇಶ ಹೊರಡಿಸಲಾಗಿರುತ್ತದೆ.

---

ಹೆಚ್‌ಡಿ 95 ಎಸ್‌ಎಸ್‌ಟಿ 2023

(ಆರಗ ಜ್ಞಾನೇಂದ್ರ)
ಗೃಹ ಸಚಿವರು